**ಪೊಲೀಸ್ ಅಧೀಕ್ಷಕರವರ ಕಛೇರಿ. ಬೆಂಗಳೂರು ಗ್ರಾಮಾಂತರ ಜಿಲ್ಲೆ.**

ದಿನಾಂಕ: 02.07.2021

# ಪತ್ರಿಕಾ ಪ್ರಕಟಣೆ

**ನೆಲಮಂಗಲ ಉಪವಿಭಾಗ ನೆಲಮಂಗಲ ಗ್ರಾಮಾಂತರ ವೃತ್ತ.**

**ಡಾಬಸ್ ಪೇಟೆ ಪೊಲೀಸ್ ಠಾಣೆ**

## ಹಣ ಸುಲಿಗೆ ಮಾಡಿದ್ದ 4 ಜನ ಆರೋಪಿಗಳ ಬಂಧನ, 4,61,000/- ನಗದು ಮತ್ತು 2 ಬೈಕ್‌ಗಳು ವಶ

**ಬೆಂಗಳೂರು ಜಿಲ್ಲೆ, ನೆಲಮಂಗಲ ಉಪ ವಿಭಾಗ, ನೆಲಮಂಗಲ ಗ್ರಾಮಾಂತರ ವೃತ್ತದ ಡಾಬಸ್ ಪೇಟೆ ಪೊಲೀಸ್ ಠಾಣಾ ಸರಹದ್ದಿನ ಎಡೇಹಳ್ಳಿ, ಹೆಚ್.ಪಿ ಪೆಟ್ರೋಲ್ ಬಂಕ್ ಬಳಿ ದಿನಾಂಕ 13.06.2021 ರಂದು ರಾತ್ರಿ ನಡೆದ ಹಣ ಸುಲಿಗೆ ಪ್ರಕರಣವನ್ನು ಪತ್ತೆ ಹಚ್ಚಿ 4 ಜನ ಆರೋಪಿಗಳನ್ನು ಬಂಧಿಸುವಲ್ಲಿ ಯಶ್ವಸಿಯಾಗಿರುತ್ತಾರೆ.**

ದಿನಾಂಕ 13.06.2021 ರಂದು ಮಧ್ಯರಾತ್ರಿ 1.45 ಗಂಟೆಗೆ ಪಿರ್ಯಾದಿ ಶ್ರೀ ಜಾವಿದ್ ಪಾಷ ಬಿನ್ ಸೈಯದ್ ಯೂಸೂಪ್, 38 ವರ್ಷ, ಅವಲಹಳ್ಳಿ, ಕನಕಪುರ ರಸ್ತೆ ಬೆಂಗಳೂರು ರವರು ಡಾಬಸ್ ಪೇಟೆ ಪೊಲೀಸ್ ಠಾಣೆಗೆ ಹಾಜರಾಗಿ ನೀಡಿದ ದೂರಿನಲ್ಲಿ ನಾನು ಶ್ರೀ ಪರ್ವಿಜ್ ರವರ ಬಳಿ ಡ್ರೈವರ್ ಕೆಲಸ ಮಾಡಿಕೊಂಡಿದ್ದು, ನಮ್ಮ ಯಜಮಾನರಾದ ಶ್ರೀ ಪರ್ವಿಜ್ ರವರು ಬೆಂಗಳೂರಿನ ಆರ್.ಟಿ.ನಗರದಲ್ಲಿ ವಾಸವಾಗಿದ್ದು, ಎಮ್ಮೆ ವ್ಯಾಪಾರ ಮಾಡುತ್ತಿರುತ್ತಾರೆ. ಇವರ ಜೊತೆಯಲ್ಲಿ ಬನಶಂಕರಿಯ ಶ್ರೀ ಪಯಾಜ್ ಸಹ ಎಮ್ಮೆ ವ್ಯಾಪಾರ ಮಾಡುತ್ತಿರುತ್ತಾರೆ. ದಿನಾಂಕ 13.06.2021 ರಂದು ಅವರ ಬಾಬ್ತು ಕೆಎ-03 ಎ.ಹೆಚ್-5046 ಕ್ಯಾಂಟರ್ ನಲ್ಲಿ ರಾಯಚೂರಿನ ಸಿಂಧನೂರಿಗೆ ಹೋಗಿ ಎಮ್ಮೆ ತರಲು ತಿಳಿಸಿ ಪರ್ವಿಜ್ ರವರು 5 ಲಕ್ಷ ರೂಪಾಯಿಗಳನ್ನು, ಪಯಾಜ್ ರವರು 3 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದು, ಅದರಂತೆ ನಾನು ಕ್ಲೀನರ್ ರಫೀಕ್ ರವರನ್ನು ಜೊತೆಯಲ್ಲಿ ಕರೆದುಕೊಂಡು ರಾತ್ರಿ ಸುಮಾರು 10.30 ಗಂಟೆಗೆ ಬೆಂಗಳೂರು ಬಿಟ್ಟು, ಡಾಬಸ್ ಪೇಟೆ ಹತ್ತಿರದ ಎಡೇಹಳ್ಳಿ ಬಳಿ ಇರುವ ಹೆಚ್.ಪಿ ಪೆಟ್ರೋಲ್ ಬಂಕ್ ನಲ್ಲಿ ಕ್ಯಾಂಟರ್ ಗೆ ಡಿಸೇಲ್ ಹಾಕಿಸಿಕೊಂಡು ಎನ್.ಹೆಚ್-48 ರಸ್ತೆಗೆ ಹೋಗುವ ಸಮಯದಲ್ಲಿ ಇಬ್ಬರು ಅಸಾಮಿಗಳು ಕಪ್ಪು ಬಣ್ಣದ ಬಜಾಜ್ ಪಲ್ಸರ್ ಬೈಕಿನಲ್ಲಿ ಬಂದು ನನ್ನ ಕ್ಯಾಂಟರನ್ನು ಅಡ್ಡಹಾಕಿದ್ದು, ನಾನು ಗಾಡಿಯನ್ನು ನಿಲ್ಲಿಸಲಾಗಿ ಅದರ ಪೈಕಿ ಒಬ್ಬಾತ ನನ್ನ ಕಡೆ ಬಂದು ಒಂದು ಕಬ್ಬಿಣದ ಲಾಂಗ್ ನ್ನು ತೋರಿಸಿ ದುಡ್ಡು ಕೊಡು ಎಂತ ಹೆದರಿಸಿದನು ಮತ್ತೊಬ್ಬನು ಕ್ಲೀನರ್ ಕಡೆ ನಿಂತಿದ್ದನು. ನನ್ನ ಕ್ಯಾಂಟರ್ ನಲ್ಲಿದ್ದ 8 ಲಕ್ಷ ರೂಪಾಯಿಗಳನ್ನು ತೆಗೆದುಕೊಂಡು ಹೋಗಿರುತ್ತಾರೆಂತ ಇತ್ಯಾದಿಯಾಗಿ ನೀಡಿದ ದೂರಿನ ಮೇರೆಗೆ ಡಾಬಸ್ ಪೇಟೆ ಪೊಲೀಸ್ ಠಾಣೆಯಲ್ಲಿ ಮೊ.ನಂ 79/2021 ಕಲಂ 392 ಐಪಿಸಿ ರೀತ್ಯ ಕೇಸು ದಾಖಲು ಮಾಡಿಕೊಂಡಿರುತ್ತೆ.

ಸದರಿ ಪ್ರಕರಣದ ಆರೋಪಿಗಳ ಪತ್ತೆಯ ಬಗ್ಗೆ. ಬೆಂಗಳೂರು ಗ್ರಾಮಾಂತರ ಜಿಲ್ಲಾ ಪೊಲೀಸ್ ಅಧೀಕ್ಷಕರವರಾದ ಡಾ. ಕೋನ ವಂಶಿ ಕೃಷ್ಣ ಐ.ಪಿ.ಎಸ್ ಮತ್ತು ಅಪರ ಪೊಲೀಸ್ ಅಧೀಕ್ಷಕರಾದ ಶ್ರೀ, ಕೆ ಲಕ್ಷ್ಮೀಗಣೇಶ್ ಕೆ.ಎಸ್.ಪಿ.ಎಸ್ ಹಾಗೂ ನೆಲಮಂಗಲ ಉಪ ವಿಭಾಗದ ಪೊಲೀಸ್ ಉಪಾಧೀಕ್ಷಕರಾದ ಶ್ರೀ, ಹೆಚ್.ಎಸ್ ಜಗದೀಶ್ ಕೆ.ಎಸ್.ಪಿ.ಎಸ್ ರವರ ಮಾರ್ಗದರ್ಶನದಲ್ಲಿ ನೆಲಮಂಗಲ ಗ್ರಾಮಾಂತರ ವೃತ್ತದ ಸರ್ಕಲ್ ಇನ್ಸ್‌ಪೆಕ್ಟರ್ ರವರಾದ ಶ್ರೀ ಎಂ.ಆರ್ ಹರೀಶ್ ರವರ ನೇತೃತ್ವದಲ್ಲಿ ಡಾಬಸ್‌ಪೇಟೆ ಪೊಲೀಸ್ ಠಾಣೆಯ ಪಿ.ಎಸ್.ಐ ಶ್ರೀ ಡಿ.ಆರ್ ಮಂಜುನಾಥ್ ಮತ್ತು ಸಿಬ್ಬಂದಿಗಳಾದ ಹೆಚ್.ಸಿ 722 ನಾರಾಯಣರಾವ್ , ಹೆಚ್.ಸಿ 398 ಶ್ರೀ ಶಿವಕುಮಾರ್ ಹೆಚ್. ಪಿ.ಸಿ 714 ಶ್ರೀಧರ್ ಬಿ.ಜಿ ಪಿ.ಸಿ 845 ಶ್ರೀ ರಂಗನಾಥ್, ಹಾಗು ಜೀಪ್ ಚಾಲಕರಾದ ಎ.ಆರ್.ಎಸ್.ಐ ಶ್ರೀ ಹರೀಶ್ ಮತ್ತು ಎ.ಹೆಚ್.ಸಿ ಸಂತೋಷ್ ರವರ ತಂಡ

**ಈ ಕೆಳಕಂಡ ಆರೋಪಿಗಳಾದ**

1) ಸಯ್ಯದ್ ಅಮಾನ್ @ ಅಮಾನ್ @ ಮೊಸಿನ್ ಬಿನ್ ಸಯ್ಯದ್ ಶಹಜಾನ್, 28 ವರ್ಷ, ಡಿ.ಜೆ ಹಳ್ಳಿ ಬೆಂಗಳೂರು ಈತನನ್ನು ಟ್ಯಾನರಿ ರಸ್ತೆಯಲ್ಲಿ,

2) **ಜಹೀರ್ ಅಬ್ಬಾಸ್ ಬಿನ್ ನಜೀರ್ ಅಹಮದ್, 29 ವರ್ಷ, ಮೆಕಾನಿಕ್ ಕೆಲಸ, ಡಿ.ಜೆ ಹಳ್ಳಿ ಬೆಂಗಳೂರು ಈತನು ಹಣ ಸುಲಿಗೆ ಮಾಡಿದ ನಂತರ ತಲೆ ಮರೆಸಿಕೊಳ್ಳುವ ಸಲುವಾಗಿ ರಾಜ್ಯ ಬಿಟ್ಟು ರಾಜಾಸ್ಥಾನದ ಜೈಪುರಕ್ಕೆ ಹೋಗಿರುವ ಬಗ್ಗೆ ಮಾಹಿತಿ ಪಡೆದು ಕ್ಷಿಪ್ರವಾಗಿ ರಾಜಾಸ್ಥಾನದ ಜೈಪುರಕ್ಕೆ ಹೋಗಿ ಪತ್ತೆ ಮಾಡಿಕೊಂಡು ಬಂದಿರುತ್ತದೆ.**

3) ಅಲ್ಲಾಬಕಾಶ್ @ ಬಕಾಶ್ ಬಿನ್ ಲೇಟ್ ಅಬ್ದುಲ್ ಖಲೀಲ್, ಡಿ.ಜೆ ಹಳ್ಳಿ ಈತನನ್ನು ಬೆಂಗಳೂರಿನ ಮಂಗಮ್ಮನ ಪಾಳ್ಯದಲ್ಲಿ

4) ಇಮ್ರಾನ್ ಖಾನ್ @ ಜೊಲ್ಲು ಇಮ್ರಾನ್ ಬಿನ್ ಪೈರೋಜ್ ಖಾನ್ 32 ವರ್ಷ, ಡಿ.ಜೆ ಹಳ್ಳಿ ಬೆಂಗಳೂರು ಈತನು ಹಾಲಿ ಬೆಂಗಳೂರಿನ ಕೇಂದ್ರ ಕಾರಗೃಹದಲ್ಲಿದ್ದು, ಬಾಡಿವಾರೆಂಟ್ ಪಡೆದು ವಿಚಾರಣೆ ಮಾಡಿರುತ್ತೆ.

**ಮೇಲ್ಕಂಡ ಆರೋಪಿಗಳನ್ನು ದಸ್ತಗಿರಿ ಮಾಡಿ ಕೃತ್ಯಕ್ಕೆ ಸಂಬಂಧಪಟ್ಟಂತೆ 4,61,000/- ನಗದು ಹಣ, 2 ಬೈಕುಗಳು ಹಾಗು ಒಂದು ಕಬ್ಬಿಣದ ಲಾಂಗನ್ನು ವಶಪಡಿಸಿಕೊಂಡಿರುತ್ತೆ. ಆರೋಪಿಗಳನ್ನು ಬಂಧಿಸುವಲ್ಲಿ ಶ್ರಮಿಸಿದ ಅಧಿಕಾರಿ ಮತ್ತು ಸಿಬ್ಬಂದಿಯವರಿಗೆ ಹಿರಿಯ ಅಧಿಕಾರಿಗಳು ಶ್ಲಾಘಿಸಿರುತ್ತಾರೆ.**

| ಕ್ರ.ಸಂ | ಆರೋಪಿ ಹೆಸರು | ಈತನ ವಿರುದ್ಧ ದಾಖಲಾಗಿರುವ ಪ್ರಕರಣಗಳು | ಆರೋಪಿಯ ಭಾವಚಿತ್ರ |
|---|---|---|---|
| 1. | ಸಯ್ಯದ್ ಅಮಾನ್ @ ಅಮಾನ್ @ ಮೊಸಿನ್ ಬಿನ್ ಸಯ್ಯದ್ ಶಹಜಾನ್, 28 ವರ್ಷ, ಡಿ.ಜೆ ಹಳ್ಳಿ ಬೆಂಗಳೂರು | ಸುಲಿಗೆ-1<br>ಕಳ್ಳತನ ಕೇಸು-1 |  |
| 2. | ಜಹೀರ್ ಅಬ್ಬಾಸ್ ಬಿನ್ ನಜೀರ್ ಅಹಮದ್, 29 ವರ್ಷ, ಮೆಕಾನಿಕ್ ಕೆಲಸ, ಡಿ.ಜೆ ಹಳ್ಳಿ ಬೆಂಗಳೂರು | ಈತನು ಡಿ.ಜೆಹಳ್ಳಿ ಪೊಲೀಸ್ ಠಾಣೆಯ ರೌಡಿ ಶೀಟರ್ ಆಗಿದ್ದು, ಈತನ ಮೇಲೆ<br>ಕೊಲೆಯತ್ನ ಕೇಸು-1<br>ಕೊಲೆ ಕೇಸು-1<br>ಡಕಾಯಿತು ಕೇಸು-1<br>ಬೆದರಿಕೆ ಕೇಸು-1 |  |
| 3. | ಅಲ್ಲಾಬಕಾಶ್ @ ಬಕಾಶ್ ಬಿನ್ ಲೇಟ್ ಅಬ್ದುಲ್ ಖಲೀಲ್, ಡಿ.ಜೆ ಹಳ್ಳಿ, ಬೆಂಗಳೂರು | ಕೊಲೆ ಯತ್ನ ಕೇಸು-1<br>ಗಾಂಜಾ ಕೇಸು-1 |  |
| 4. | ಇಮ್ರಾನ್ ಖಾನ್ @ ಜೊಲ್ಲು ಇಮ್ರಾನ್, | ಡಿ.ಜೆ ಹಳ್ಳಿ ಪೊಲೀಸ್ ಠಾಣೆಯಲ್ಲಿ ರೌಡಿ ಶೀಟರ್ ಇರುತ್ತದೆ. ಈತನ ಮೇಲೆ<br>ಕಳ್ಳತನ ಕೇಸು-1<br>ಮನೆಕಳ್ಳತನ ಕೇಸು-3<br>ಗಾಂಜಾ ಕೇಸು-2<br>ಆರಮ್ಸ್ ಆಕ್ಟ್-1<br>ಗಲಾಟೆ ಕೇಸು-1<br>ಬೆದರಿಕೆ ಕೇಸು-2<br>ಸುಲಿಗೆ ಕೇಸು-2<br>ಕೊಲೆ ಯತ್ನ ಕೇಸು-1<br>ದರೋಡೆ ಕೇಸು-2<br>ದರೋಡೆಗೆ ಯತ್ನ-3<br>**ಒಟ್ಟು 18 ಕೇಸುಗಳು** |  |

**(ಡಾ. ಕೋನ ವಂಶಿ ಕೃಷ್ಣ ಐಪಿಎಸ್)**
**ಪೊಲೀಸ್ ಅಧೀಕ್ಷಕರು**
**ಬೆಂಗಳೂರು ಗ್ರಾಮಾಂತರ ಜಿಲ್ಲೆ**